# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಧಾರವಾಡ.

ಸಂಖ್ಯೆ ಃಜಿ11ಃಮ.ಅ.ಸಂ.ಶಾ ಃ ಘೋ ಃ30ಃ 2010–11/1015 ದಿನಾಂಕ, 02–06–2011.

## – ಃ ಜ್ಞಾಪನ ಃ –

ವಿಷಯ ಃ ಇಂಡಿಯನ್ ಎಜ್ಯುಕೇಶನ ಸಂಸ್ಥೆ (ರಿ) ರಾಣೇಬೆನ್ನೂರು ಈ ಆಢಳಿತ ಮಂಡಳಿಯಡಿ ನಡೆಯುತ್ತಿರುವ ಕೇಂಬ್ರಿಡ್ಜ ಪಬ್ಲಿಕ ಸ್ಕೂಲ್ ಬಳ್ಳಾರಿ ಪ್ಲಾಟ ರಾಣೇಬೆನ್ನೂರ ಈ ಶಾಲೆಯನ್ನು ಮತೀಯ ಅಲ್ಪ ಸಂಖ್ಯಾತ ಶಾಲೆ ಎಂದು ಘೋಷಿಸುವ ಕುರಿತು.

ಉಲ್ಲೇಖ ಃ 1. ಸರಕಾರದ ಅಧೀಸೂಚನೆ ಸಂಖ್ಯೆ ಃ ಇಡಿ4ಃಎಸ್.ಎಂ.ಎಸ್.–2005 ದಿ ಃ 11–9–2007.

2. ಸರಕಾರದ ಸುತ್ತೋಲೆ ಸಂಖ್ಯೆ ಃ ಇಡಿ5ಃಎಸ್.ಎಂ.ಎಸ್. 2002 ದಿ ಃ 20–7–2004, 12–12–2006.

3. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ ಇವರ ಪತ್ರ ಸಂಖ್ಯೆ ಃ ಈ2ಃಬೋ.ಸಿ.ಖಾಪ್ರಾಶಾಃಬಾಅಸಂಶಾಘೋ ಕುರಿತುಃ2010–11 ದಿನಾಂಕ, 22–11–2010

4. ದಿನಾಂಕ: 28–05–2011 ರಂದು ನಡೆದ ಸಭೆಯ ನಡಾವಳಿ

ಪ್ರಸ್ತಾವನೆ,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (3) ರ ಪ್ರಕಾರ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ ಇವರು ಇಂಡಿಯನ್ ಎಜ್ಯುಕೇಶನ ಸಂಸ್ಥೆ (ರಿ) ರಾಣೇಬೆನ್ನೂರು ಈ ಆಢಳಿತ ಮಂಡಳಿಯಡಿ ನಡೆಯುತ್ತಿರುವ ಕೇಂಬ್ರಿಡ್ಜ ಪಬ್ಲಿಕ ಸ್ಕೂಲ್ ಬಳ್ಳಾರಿ ಪ್ಲಾಟ ರಾಣೇಬೆನ್ನೂರ ಈ ಶಾಲೆಯನ್ನು ಮತೀಯ ಅಲ್ಪ ಸಂಖ್ಯಾತ ಶಾಲೆ ಎಂದು ಘೋಷಿಸುವ ಕುರಿತು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರ ಆಡಳಿತ ಮಂಡಳಿಯಲ್ಲಿ ಎಲ್ಲಾ ಸದಸ್ಯರು ಮುಸ್ಲಿಂ ಸಮುದಾಯಕ್ಕೆ ಸೇರಿದ ಸದಸ್ಯರು ಇರುತ್ತಾರೆ.

ಸದರ ಶಾಲೆಯಲ್ಲಿ ದಾಖಲಾದ ಒಟ್ಟು 285 ಮಕ್ಕಳಲ್ಲಿ 181 ಮಕ್ಕಳು ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇದು ಆ ಪ್ರದೇಶದ ಜನ ಸಂಖ್ಯೆಗೆ ಅನುಗುಣವಾಗಿರುವುದರಿಂದ ಹಾಗೂ ಉಳಿದ ವಿವರಗಳು, ಉಲ್ಲೇಖ (1) ಮತ್ತು (2) ಸರ್ಕಾರದ ಆದೇಶದಲ್ಲಿ ಸೂಚಿಸಿರುವ ಅಧಿಸೂಚನೆ ಪ್ರಕಾರ ಇವೆ. ಜಿಲ್ಲೆಯ ಉಪನಿರ್ದೇಶಕರು, ಸದರ ಶಾಲೆಯನ್ನು ಮತೀಯ ಅಲ್ಪ ಸಂಖ್ಯಾತ ಶಾಲೆ (ಮುಸ್ಲಿಂ) ಎಂದು ಘೋಷಣೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ದಿನಾಂಕ 28–05–2011 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಸಭೆಯಲ್ಲಿ ಸದರ ಶಾಲೆಯನ್ನು ಮತೀಯ ಅಲ್ಪ ಸಂಖ್ಯಾತ ಶಾಲೆ (ಮುಸ್ಲಿಂ) ಎಂದು ಘೋಷಣೆ ಮಾಡಲು ತೀರ್ಮಾನಿಸಿದೆ. ಸಮಿತಿಯ ಸಭೆಯ ನಡವಳಿ ಪ್ರಕಾರ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ,

ಪ್ರಸ್ತಾವನೆಯಲ್ಲಿ ನಮೂದಿಸಿದ ಎಲ್ಲ ಅಂಶಗಳನ್ನು ಪರಿಶೀಲಿಸಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ ಇವರ ಶಿಫಾರಸ್ಸಿನ ಮೇರೆಗೆ ಹಾಗೂ ದಿನಾಂಕ, 28–05–2011 ರಂದು ನಡೆದ ಸಮಿತಿಯ ಸಭೆಯ ನಡವಳಿಯಂತೆ, ಇಂಡಿಯನ್ ಎಜ್ಯುಕೇಶನ ಸಂಸ್ಥೆ (ರಿ) ರಾಣೇಬೆನ್ನೂರು ಈ ಆಡಳಿತ ಮಂಡಳಿಯಡಿ ನಡೆಯುತ್ತಿರುವ ಕೇಂಬ್ರಿಡ್ಜ ಪಬ್ಲಿಕ ಸ್ಕೂಲ್ ಬಳ್ಳಾರಿ ಪ್ಲಾಟ ರಾಣೇಬೆನ್ನೂರ ಈ ಶಾಲೆಯನ್ನು ಈ ಕೆಳಗೆ ನಮೂದಿಸಿದ ಷರತ್ತಿಗೊಳಪಟ್ಟು ಮತೀಯ ಅಲ್ಪ ಸಂಖ್ಯಾತ ಶಾಲೆ (ಮುಸ್ಲಿಂ) ಎಂದು ಘೋಷಿಸಲಾಗಿದೆ.

ಷರತ್ತುಗಳು,

1) ಶಾಲೆಯನ್ನು ನಡೆಸುವ ಆಡಳಿತ ಮಂಡಳಿಯು ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ ಪ್ರಕಾರ ನೋಂದಣಿಯಾಗಿರಬೇಕು. ಹಾಗೂ ಕಾಲಕಾಲಕ್ಕೆ ನವೀಕರಣ ಹೊಂದಿರತಕ್ಕದ್ದು.

2) ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಆಯಾ ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆಯ ಕನಿಷ್ಟ ಮೂರನೇ ಎರಡರಷ್ಟು ಇರಬೇಕು.
3) ಶಾಲೆಯನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು/ಕಾರ್ಯಕಾರಿ ಸಮಿತಿ ಸದಸ್ಯರು ಸಂಬಂಧಿಸಿದ ತಹಶೀಲ್ದಾರ ಅವರಿಂದ ಜಾತಿ/ಮತೀಯ ಅಲ್ಪಸಂಖ್ಯಾತ ಪ್ರಮಾಣ ಪತ್ರ ಪಡೆದಿರಬೇಕು.
4) ಆಯಾ ಮತೀಯ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳಲ್ಲಿ ಆಯಾ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾ ಮತೀಯ ಅಲ್ಪಸಂಖ್ಯಾತ ಸಮುದಾಯದ ಜನಸಂಖ್ಯೆಗೆ ತಕ್ಕಂತೆ, ಮತೀಯ ಅಲ್ಪ ಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಠ ಅದೇ ಪ್ರಮಾಣದಲ್ಲಿ ಕಡ್ಡಾಯವಾಗಿ ದಾಖಲು ಮಾಡಿಕೊಳ್ಳತಕ್ಕದ್ದು.

ಶಾಲೆಯ ಮಾನ್ಯತೆಯನ್ನು ಕಾಲಕಾಲಕ್ಕೆ ನವೀಕರಿಸುವ ಸಮಯದಲ್ಲಿ ಪ್ರಸ್ತಾವನೆಯಲ್ಲಿ ತಿಳಿಸಲಾಗಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಮತೀಯ ಅಲ್ಪ ಸಂಖ್ಯಾತ ಸ್ಥಾನಮಾನವನ್ನು ಹಿಂಪಡೆಯಲಾಗುವುದು.

**ಆಯುಕ್ತರು ಹಾಗೂ ವಿಭಾಗ ಮಟ್ಟದ ಭಾಷಾ/ಮತೀಯ,**
**ಅಲ್ಪ ಸಂಖ್ಯಾತ ಸಮೀತಿಯ ಅಧ್ಯಕ್ಷರು,**
**ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.**

ಗೆ,

1) ಅಧ್ಯಕ್ಷರು, ಇಂಡಿಯನ್ ಎಜ್ಯುಕೇಶನ್ ಸೊಸಾಯಿಟಿ(ರಿ) ಬಳ್ಳಾರಿ ಪ್ಲಾಟ್ ರಾಣೇಬೆನ್ನೂರು ಜಿ: ಹಾವೇರಿ
2) ಪ್ರಧಾನ ಗುರುಗಳು ಕೇಂಬ್ರಿಡ್ಜ ಪಬ್ಲಿಕ ಸ್ಕೂಲ್, ಮೃತ್ಯುಂಜಯ ನಗರ, ಬಳ್ಳಾರಿ ಪ್ಲಾಟ್ ರಾಣೇಬೆನ್ನೂರು ಜಿ: ಹಾವೇರಿ
3) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ ಜಿಲ್ಲೆ
4) ಕಛೇರಿ ಪ್ರತಿ.